ಜ್ಯುಡಿಷಿಯಲ್ ಎನ್‌ಕ್ವೈರಿ ಎಂದು ಹೇಳಿದ್ದೀರಿ. ನಮ್ಮ ಪಕ್ಷದ ಮುಖಂಡರು ಭೇಟಿ ಮಾಡಿದಾಗ ಈಗ ಚುನಾವಣೆಯು ಅಡ್ಡ ಬರುತ್ತದೆ ಮಾಡುವುದಕ್ಕೆ ಆಗುವುದಿಲ್ಲ, ಪೊಲೀಸ್ ಅಧಿಕಾರಿಗಳನ್ನು ಚುನಾವಣೆ ಮುಗಿದ ಮೇಲೆ ಮಾಡುತ್ತೇವೆಂದು ಹೇಳಿದ್ದೀರಿ. ತಾವು ಈಗ ಹೇಳಲ್ಲಿವೆಂದು ಹೇಳಿದರೆ, ನೀವು ಹೇಳಿರತಕ್ಕಂಥದ್ದು ಮತ್ತು ನಮ್ಮ ಪಕ್ಷದ ಮುಖಂಡರು ಹೇಳಿರತಕ್ಕಂಥದ್ದು ಯಾವುದು ಸತ್ಯಾಂಶವೆಂದು ತಿಳಿಯಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಅವರ ಮನೆಯಲ್ಲಿ ಹೇಳಿರತಕ್ಕಂತಹ ವಿಷಯವನ್ನು ನಾನು ಹೇಳಿರತಕ್ಕಂಥದ್ದು ಹಿಯರಸೇ ಎವಿಡೆನ್ಸ್ ಹೇಳಿ ನಿಮ್ಮ ಸರ್ಕಾರವನ್ನು ಪೇಚಿಗೆ ಸಿಕ್ಕಿಸಿ ನಿಮ್ಮನ್ನು ರಾಜೀನಾಮೆ ಕೊಡಿಸಬೇಕೆಂದು ಹೇಳತಕ್ಕಂತಹ ಪಕ್ಷ ನಮ್ಮದು ಅಲ್ಲವೆಂದು ಸ್ಪಷ್ಟಪಡಿಸುತ್ತೇನೆ. ಆ ಕಾರ್ಮಿಕರೂ ಕೂಡ ನಿಮ್ಮ ಪಕ್ಷಕ್ಕೆ ಮತವನ್ನು ಕೊಟ್ಟಿದ್ದಾರೆ. ಆ ಕಾರ್ಮಿಕರುಗಳು ಕೂಡ ನಿಮಗೆ ಮತವನ್ನು ಕೊಡಬೇಕೆಂದು ಹೇಳಿ ನಾವು ಅವರನ್ನು ಕೇಳಿದ್ದೇವೆ. ನಿಮ್ಮ ಸರ್ಕಾರವನ್ನು ಉಳಿಸಲಿಕ್ಕೆ ನಾವು ಮತವನ್ನು ಕೇಳಿದ್ದಲ್ಲ; ಕಾರ್ಮಿಕರ ಮೇಲೆ ಗುಂಡು ಹಾರಿಸಿದ್ದು ನಮ್ಮ ಪ್ರಶ್ನೆ ಇರುವುದು. ನೀವು ಅವರ ಮೇಲೆ ಆರೋಪ ಮಾಡಿಕೊಳ್ಳಿ, ಇವರು ನಿಮ್ಮ ಮೇಲೆ ಆರೋಪ ಮಾಡಿಕೊಳ್ಳಲಿ. ಅದು ನಮಗೆ ಬೇಕಾಗಿಲ್ಲ. ನಮಗೆ ಬೇಕಾಗಿರುವಂಥದ್ದು ಆ ಕಾರ್ಮಿಕರ ಮೇಲೆ ನಡೆದಿರತಕ್ಕಂತಹ ಅನ್ಯಾಯ, ಅವರ ಕುಟುಂಬದವರನ್ನು ಕಳೆದುಕೊಂಡಿರುವುದಕ್ಕೆ ಪರಿಹಾರವನ್ನು ಕೊಡಬೇಕು. ಈ ಪ್ರಶ್ನೆಯನ್ನು ಪರಿಹಾರ ಮಾಡಿ ಎಂದು ನಾವು ಕೇಳುತ್ತಿರತಕ್ಕಂಥದ್ದು, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ, ಅವರನ್ನು ಸಸ್ಪೆಂಡ್ ಮಾಡುವುದಿಲ್ಲವೆಂದು ಹೇಳಿದರೆ ಆ ಮಾಲೀಕರ ಮೇಲೆ ಕೇಸ್ ದಾಖಲು ಮಾಡದಿದ್ದರೆ ನಾನು ಅದನ್ನು ಪ್ರತಿಭಟನೆಯನ್ನು ಮಾಡಿ ಧರಣಿ ಕುಳಿತುಕೊಳ್ಳುತ್ತೇನೆ.

(ಈ ಹಂತದಲ್ಲಿ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ಬಾವಿಗೆ ಬಂದು ಧರಣಿ ಕುಳಿತುಕೊಂಡರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ನಾವು ತಪ್ಪಿತಸ್ಥ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಎಂದು ಹೇಳಿದ್ದು ಏಕೆಂದರೆ ತಾವು ಒಪ್ಪಿಕೊಂಡಿದಂತೆಯೇ ಅಧಿಕಾರಿಗಳ ಮೇಲೆ ಸಂಶಯ ಬಂದಿದೆ. ಅದಕ್ಕೆ ಇವೊತ್ತಿನ ದಿವಸ ಜ್ಯುಡಿಷಿಯಲ್ ಪ್ರೋಬ್ ಮಾಡಬೇಕಾದಂತಹ ಪ್ರಸಂಗ ಬಂದಿದೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು):- ಡಿಪಾರ್ಟ್‌ಮೆಂಟ್‌ಲ್ ರಿಪೋರ್ಟ್ ಏನಾಯಿತು ಎಂದು ತಿಳಿದುಕೊಂಡು ಆದರಲ್ಲಿ ಯಾವ ಆಫೀಸರ್‌ನಿಂದ ನಿಮ್ಮ ದೃಷ್ಟಿಯಲ್ಲಿ ಆ ಗೌಡ ಈ ಗೌಡ ಇಲ್ಲಿಂದ ಕರೆಸಿದರು, ಎಂದು ನೀವು ಅಂದರೆ ಜವಾಬ್ದಾರಿ ವಿರೋಧ ಪಕ್ಷದ ನಾಯಕರು ಏನು ಹೇಳುರುತ್ತೀರಿ ಅದು ಎಷ್ಟರಮಟ್ಟಿಗೆ ಎಂಬ ಬಗ್ಗೆ I have to find out the details about it.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದು ಹಾರಿಕೆ ಉತ್ತರ ಏಕೆಂದರೆ ಇದು ತಮಗೂ ಸಹ ಗೊತ್ತಿದೆ. ನಾವು ಏನು ಮಾಡುವುದು ಮಾಡಿದ್ದೇವೆ. ಅದು ನಮಗೆ ಗೊತ್ತಿದೆ ಎಲ್ಲದ್ದಕ್ಕೂ ಇಮ್ಯೂನ್ ಆಗಿ ಬಿಟ್ಟಿದ್ದೀರಿ. ಆ ಪ್ರಶ್ನೆ ಬೇರೆ, ಆದರೂ ಕೂಡ ಈ ದೇಶದ ಜನರಿಗೆ ಗೊತ್ತಾಗಬೇಕು ಯಾವ